ಬೆರೆತು ಆ ತಾಣದಲ್ಲಿ ತಮಗೆ ಆಸಕ್ತಿಯೆನಿಸಿದ ವಿಷಯಗಳನ್ನು ಕೂಲಂಕುಶವಾಗಿ ತಿಳಿದುಕೊಳ್ಳುವುದೇ 'ಸ್ಲೋ ಟೂರಿಸಂ'ನ ಉದ್ದೇಶ.

'ಭಾರತದಲ್ಲಿನ ತಮ್ಮ ಪ್ರವಾಸಕ್ಕೆ ಮುಖ್ಯವಾಗಿ ಮೈಸೂರನ್ನೇ ಆಯ್ದುಕೊಂಡದ್ದು ಏಕೆ?' ಎಂದು ಇವರನ್ನು ಪ್ರಶ್ನಿಸಿದರೆ ಸಿಗುವ ಉತ್ತರ ಕುತೂಹಲಕರ.

'ನಮ್ಮ ಪ್ರವಾಸದ ಉದ್ದೇಶ ಕೇವಲ ಪ್ರವಾಸಿ ತಾಣಗಳನ್ನು ಸಂದರ್ಶಿಸುವುದಲ್ಲ. ಆಯಾ ದೇಶದ ಆಚಾರ, ವಿಚಾರ, ಕಲೆ ಸಂಸ್ಕೃತಿ, ಆಹಾರ, ಉಡುಗೆ ತೊಡುಗೆ ಇಂತಹ ಹತ್ತು ಹಲವು ವಿಷಯಗಳನ್ನು ಕೂಲಂಕುಶವಾಗಿ ತಿಳಿಯುವುದರಲ್ಲಿ ನಮಗೆ ಆಸಕ್ತಿಯಿದೆ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನ ಬಗ್ಗೆ ಕೇಳಿದ್ದೆವು. ನಮ್ಮ ಆಸಕ್ತಿಗೆ ಮೈಸೂರು ಸೂಕ್ತವೆನಿಸಿತು. ಇಲ್ಲಿ ಯೋಗ, ಭರತನಾಟ್ಯ, ಶಾಸ್ತ್ರೀಯ ಸಂಗೀತ, ಚಿತ್ರಕಲೆ, ಐತಿಹಾಸಿಕ ಕಟ್ಟಡಗಳು, ತೀರಾ ಗಡಿಬಿಡಿಯಿಲ್ಲದ ಜನಜೀವನ ನಮ್ಮನ್ನು ಮೈಸೂರಿನತ್ತ ಸೆಳೆಯಿತು.' ಎನ್ನುತ್ತಾರೆ ಮೈಕಾ ಸಿನ್‌ಕ್ಲೇರ್.

ವಿವಿಧ ದೇಶಗಳನ್ನು ಸುತ್ತಾಡುತ್ತಿರುವ ಇವರಿಗೆ ಭಾರತದ ಹಲವು ವಿಚಾರಗಳು ವಿಶಿಷ್ಟವೆನಿಸುತ್ತವೆ. ಮುಖ್ಯವಾಗಿ ಭಾರತೀಯರ ಅಹಿಂಸಾ ಧೋರಣೆ, ಪಶುಪಕ್ಷಿಗಳನ್ನು ಪ್ರೀತಿಸುವ ಬಗೆ, ನಿಸರ್ಗದ ಬಗೆಗಿನ ಕಾಳಜಿ, ಸಸ್ಯಾಹಾರಿ ಜೀವನ, ವ್ಯಾವಹಾರಿಕವಾಗಿರದ ಧ್ಯಾನವನ್ನೇ ಮೂಲವಾಗಿಸಿಕೊಂಡ ಯೋಗಾಭ್ಯಾಸ, ಜನರ ಜೀವನಪ್ರೀತಿ, ಪರಸ್ಪರ ಸಹಾಯ ಮನೋಭಾವ, ದೇಸಿ ಜೀವನಕ್ರಮ ಇಂತಹ ಕಾರಣಗಳಿಂದ ಇವರಿಗೆ ಭಾರತ ವಿಶ್ವದಲ್ಲಿ ವಿಭಿನ್ನವೆನಿಸಿದೆ, ವಿಶಿಷ್ಟವೆನಿಸಿದೆ.

ಮೈಸೂರಿನ ಕುವೆಂಪುನಗರದಲ್ಲಿ ಇವರು ಮನೆ ಮಾಡಿಕೊಂಡು ಸ್ಥಳೀಯರೊಂದಿಗೆ ಹೊಂದಿಕೊಂಡಿದ್ದಾರೆ. ಮೈಕಾ ಹಾಗೂ ಇವರ ಎಂಟು ವರ್ಷ ವಯಸ್ಸಿನ ಮಗಳು ಸಶಾ ಭರತನಾಟ್ಯ ಹಾಗೂ ಯೋಗಾಭ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹತ್ತು ವರ್ಷದ ಐಸಾಕ್‌ಗೆ ಮೈಸೂರಿನ ಜನಜೀವನ ಹಾಗೂ ಇಲ್ಲಿನ ವಾತಾವರಣ ಮತ್ತು ಪರಿಸರವೆಂದರೆ ಇಷ್ಟ. ತನ್ನ ತಂದೆ ಎರಿಕ್‌ರೊಡನೆ ಸಮಯ ಸಿಕ್ಕಾಗಲೆಲ್ಲಾ ಮೈಸೂರನ್ನು







ಅರಿವು ತಂಡದೊಂದಿಗೆ ಐಸಾಕ್

ಕಾಲ್ನಡಿಗೆಯಲ್ಲೇ ಸುತ್ತುತ್ತಾನೆ. ಕನ್ನಡ ನಾಟಕದಲ್ಲೂ ಐಸಾಕ್ ಅಭಿನಯಿಸಿದ್ದಾನೆ. ಮೈಸೂರಿಗೆ ಬಂದ ನಂತರ ಶುದ್ಧ ಸಸ್ಯಾಹಾರಿಯಾಗಿರುವ ಐಸಾಕ್ ಜೀವನ ಪರ್ಯಂತ ಸಸ್ಯಹಾರಿಯಾಗಿ ಮುಂದುವರೆಯುವ ಸಂಕಲ್ಪ ಹೊಂದಿದ್ದಾನೆ. ಇವನ ತಾಯಿ ಮೈಕಾ ಅವರೂ ಈತನಿಂದಾಗಿ ಯಾವುದೇ ದೇಶಕ್ಕೆ ಹೋದರೂ ಮನೆಯಲ್ಲಿ ಸಸ್ಯಾಹಾರಿ ಅಡುಗೆಯನ್ನಷ್ಟೇ ಮಾಡುವ ನಿಶ್ಚಯ ಮಾಡಿದ್ದಾರೆ.

ಹೌದು, ಹೀಗೆ ತಿರುಗಾಡಲು ದುಡ್ಡು ಬೇಕಲ್ಲ? ದೇಶಾಂತರ ಸಂಚಾರ ಮಾಡುತ್ತಿರುವ ಇವರು ಮಾಡುತ್ತಿರುವ ಉದ್ಯೋಗವಾದರೂ ಏನು? ಮಕ್ಕಳ ವಿದ್ಯಾಭ್ಯಾಸವಾದರೂ ಹೇಗೆ ನಡೆಯುತ್ತದೆ.. ಎಂಬ ಪ್ರಶ್ನೆ ಮೂಡುವುದು ಸಹಜ. ಎರಿಕ್ ಕಂಪನಿಯೊಂದರ ಉದ್ಯೋಗಿಯಾಗಿದ್ದು ಆನ್‌ಲೈನ್ ಮೂಲಕವೇ ಕರ್ತವ್ಯ ನಿರ್ವಹಿಸುತ್ತಾರೆ. ಮೈಕಾ ಕಿರುಬಂಡವಾಳದ ವಿಷಯದಲ್ಲಿ ಯೋಜನಾ ವರದಿ ಸಿದ್ಧಪಡಿಸುತ್ತಾರೆ.

ಮಕ್ಕಳ ಶಾಲೆ ಹೇಗೆ?

ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಮೂರರಿಂದ ಆರು ತಿಂಗಳಿಗೊಮ್ಮೆ ಪ್ರಯಾಣ ಬೆಳೆಸುವ ಇವರು ಮಕ್ಕಳಿಗೆ ಕ್ರಮಬದ್ಧ ಶಿಕ್ಷಣ ಕೊಡಿಸಲು ಸಾಧ್ಯವಿಲ್ಲ. ಅಲ್ಲದೇ ಪ್ರವಾಸದ ಅನುಭವದಿಂದಲೇ ಮಕ್ಕಳಿಗೆ ಹೆಚ್ಚಿನ ಜ್ಞಾನಾರ್ಜನೆಯಾಗುತ್ತದೆ ಎಂದು ಬಲವಾಗಿ ನಂಬಿರುವ ಈ ಪೋಷಕರು, ಮಕ್ಕಳಿಗೆ ತಾವೇ ಸ್ವತಃ ಅಗತ್ಯವಾದ ವಿದ್ಯಾಭ್ಯಾಸವನ್ನು ಮಾಡಿಸುತ್ತಾರೆ. ಅಲ್ಲದೆ ತಾವು ಪ್ರವಾಸ ಕೈಗೊಳ್ಳುವ ದೇಶದಲ್ಲಿ ಪರ್ಯಾಯ ಶಿಕ್ಷಣ ನೀಡಬಲ್ಲ ಶಾಲೆಗಳಿದ್ದರೆ ಒಂದಷ್ಟು ದಿನ ಈ ಶಾಲೆಗಳಲ್ಲೂ ಈ ಮಕ್ಕಳು ಕಲಿಯುತ್ತಾರೆ. ಪಠ್ಯಪುಸ್ತಕದ ಶಿಕ್ಷಣಕ್ಕಿಂತ ಪ್ರಕೃತಿ ಪಾಠಕ್ಕೆ ಮಕ್ಕಳನ್ನು ಒಡ್ಡುವ ಶಾಲೆಗಳಿಲ್ಲೇ ಈ ಮಕ್ಕಳು ಕಲಿತಿದ್ದಾರೆ.

ಈಗ ಮೈಸೂರಿನ ಲಿಂಗಾಂಬುಧಿಪಾಳ್ಯದಲ್ಲಿರುವ "ಅರಿವು" ಕನ್ನಡ ಶಾಲೆಯಲ್ಲಿ ಈ ಮೂವರು ಮಕ್ಕಳು ಬಿಡುವಿನ ವೇಳೆಯಲ್ಲಿ ಕನ್ನಡ ಮಾಧ್ಯಮದಲ್ಲಿಯೇ ಓದುತ್ತಿದ್ದಾರೆ. ಮಕ್ಕಳಿಗೆ ಸಾಮಾಜಿಕ ಕಳಕಳಿ, ಪರಿಸರದೊಂದಿಗೆ ಹೊಂದಾಣಿಕೆ, ಸಾಂಸ್ಕೃತಿಕ ಬದ್ಧತೆ ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಮ್ಮತನ ಕಾಯ್ದುಕೊಳ್ಳುವಂತಹ ಸುಲಭ– ಸಹಜ ಕಲಿಕೆಗೆ ಈ ಶಾಲೆಯಲ್ಲಿ ಅವಕಾಶವಿದೆ ಎಂಬ ಸಂಗತಿಯನ್ನು ಅಂತರ್ಜಾಲದ ಮೂಲಕ ತಿಳಿದುಕೊಂಡ ಈ ಪೋಷಕರು ಈ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಬಿಡುವಿನ ವೇಳೆಯಲ್ಲಿ ಈ ಶಾಲೆಯ ಮಕ್ಕಳಿಗೆ ಮೈಕಾ ಅವರು ಇಂಗ್ಲಿಷ್ ಸಂವಹನದ ತರಬೇತಿ ನೀಡುತ್ತಾರೆ.

'ನಿಮ್ಮ ಮುಂದಿನ ಪ್ರವಾಸ ಯಾವ ದೇಶಗಳಿಗೆ?' ಎಂದು ಹತ್ತು ವರ್ಷದ ಐಸಾಕ್‌ನನ್ನು ಕೇಳಿದರೆ ಬಸ್ಸಿನ ನಿರ್ವಾಹಕನಂತೆ ನೇಪಾಳ, ಭೂತಾನ್, ಜಪಾನ್, ಫಿಲಿಪ್ಪೀನ್ಸ್, ಮೊಜಾಂಬಿಕ್, ಸ್ವಾಜಿಲ್ಯಾಂಡ್ ಎಂದು ಪಟಪಟನೆ ಹೇಳುತ್ತಾನೆ. ಅರಿವು ಶಾಲೆ, ಮೈಸೂರು, ದೋಸೆ, ಸಾಂಬಾರ್ ಎಂದರೆ ಬಲು ಇಷ್ಟ ಎನ್ನುವ ಇವನು, ಅವಕಾಶ ಸಿಕ್ಕರೆ ಮತ್ತೊಮ್ಮೆ ಭಾರತಕ್ಕೆ ಬರುತ್ತೇನೆ ಎಂದು ಹೇಳಲು ಮರೆಯುವುದಿಲ್ಲ.